**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.118/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ಸುಲೋಚನಾ ಗರಗ | ಸಿಡಬ್ಲ್ಯೂ | 13 |
| ತಂದೆಯ ಹೆಸರು | ಹೊನ್ನಪ್ಪ | ಪಿಡಬ್ಲ್ಯೂ | 5 |
| ವಯಸ್ಸು | 56 ವರ್ಷ | | |
| ಉದ್ಯೋಗ | ಮಹಿಳಾ ಪಿ.ಎಸ್.ಐ , ರಾಜ್ಯ ಗುಪ್ತ ವಾರ್ತೆ, ಹಾವೇರಿ | | |
| ವಾಸಸ್ಥಳ | ಹಾವೇರಿ. | | |

**ದಿಃ12.03.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1)** ದಿನಾಂಕಃ 29.03.2016 ರಿಂದ ದಿನಾಂಕಃ 21.07.2022 ರವರೆಗೆ ಹಾವೇರಿ ಮಹಿಳಾ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 19.07.2018 ರಂದು ಈ ಕೇಸಿನ ಕಡತವನ್ನು ಚಾ.ಸಾ.12 ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿದ್ದೇನೆ. ದಿನಾಂಕಃ 20.07.2018 ರಂದು ಬೆನಕನಹಳ್ಳಿ ಗ್ರಾಮಕ್ಕೆ ಬೇಟಿ ನೀಡಿ ಚಾ.ಸಾ-1 ರವರನ್ನು ಹಾಜರುಪಡಿಸಿಕೊಂಡು ಚಾ.ಸಾ-2,5,6 ರಿಂದ 9 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿನಾಂಕಃ 14.10.2018 ರಂದು ಚಾ.ಸಾ-10 ರವರ ಹೇಳಿಕೆಯನ್ನು ಪಡೆದಿದ್ದೇನೆ ಮತ್ತು ಅವರು ಹಾಜರುಪಡಿಸಿದ ಮದುವೆ ಸಮಯದ ಪೋಟೋಗಳನ್ನು ಪಂಚರ ಸಮಕ್ಷಮ ಜಪ್ತು ಮಾಡಿದ್ದೇನೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದೇನೆ. ಅವುಗಳನ್ನು ಗುರುತಿಸಿದ್ದು, ಈಗಾಗಲೇ ನಿ.ಪಿ-4 ರಿಂದ ನಿ.ಪಿ-20 ಎಂದು ಗುರುತಿಸಲ್ಪಟ್ಟಿದೆ. ಒಂದು ಪೋಟೋವನ್ನು ಗುರುತಿಸಿದ್ದು, ನಿ.ಪಿ-22 ಎಂದು ಗುರತಿಸಲಾಯಿತು.

**2)** ಚಾ.ಸಾ-10 ರವರಿಂದ ಪೋಟೋಗಳನ್ನು ತೆಗೆದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದಿದ್ದೇನೆ. ಅದನ್ನು ಗುರುತಿಸಿದ್ದು ನಿ.ಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-23(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೋಟೇಶರವರ ಮರುಹೇಳಿಕೆ ಪಡೆದಿದ್ದೇನೆ. ದಿನಾಂಕಃ 23.11.2018 ರಂದು

ಆರೋಪಿತರಿಗೆ ನೋಟಿಸ ಜಾರಿ ಮಾಡಿ, ಠಾಣೆಗೆ ಹಾಜರುಪಡಿಸಿಕೊಂಡು, ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಆರೋಪಿತರ ಪರವಾಗಿಃ**

**3)** ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪೋಟೋಗಳನ್ನು ಜಪ್ತು ಮಾಡಿದ ಬಗ್ಗೆ ಪಂಚನಾಮೆ ಮಾಡಿಲ್ಲ ಅಂದರೆ ಸರಿ. ನನ್ನ ತನಿಖಾವಧಿಯಲ್ಲಿ ಆರೋಪಿತರ ವಿರುದ್ದ ಯಾವುದೇ ಅಪರಾಧಗಳು ಕಂಡು ಬರದೇ ಇದ್ದರೂ, ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.